

بِسۡمِ اللّٰہِ الرَّحۡمٰنِ الرَّحِیۡمِ

# ಹುಖೂಖುಲ್ ಇಬಾದ್‌ನ ಅತಿ ಸೂಕ್ಷ್ಮ ಅಂಶಗಳನ್ನು ಸಹ ಪಾಲಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 03-02-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಬಂಗ್ಲಾದೇಶದ ಜಲ್ಸ ಸಾಲಾನ ಪ್ರಾರಂಭವಾಗಲಿದೆ. ಅವರ ಜಲ್ಸದ ಕೊನೆಯ ದಿನ ನನ್ನ ಭಾಷಣವಿಲ್ಲದ ಕಾರಣ ಅವರ ಅಪೇಕ್ಷೆಯಂತೆ ಈ ದಿನದ ಖುತ್‌ಬದಲ್ಲಿ ಅವರ ಜಲ್ಸ ಸಾಲಾನಕ್ಕೆ ಸಂಬಂಧಿಸಿ ಕೆಲವು ವಿಷಯಗಳನ್ನು ಪ್ರಸ್ತಾಪಿಸುವೆನು. ಅಲ್ಲಾಹನ ಅನುಗ್ರಹದಿಂದ ಬಂಗ್ಲಾದೇಶದ ಜಮಾಅತ್ ಸಹ ಬಹಳ ನಿಷ್ಠಾಂವಂತ ಜಮಾಅತ್ ಆಗಿದೆ. ಅಹ್ಮದಿಯರು ತಮ್ಮ ಜೀವವನ್ನು ಬಲಿದಾನ ಮಾಡಿದ ದೇಶಗಳಲ್ಲಿ ಈ ದೇಶವೂ ಸೇರಿದೆ. ಅಂದಾಜು ಹನ್ನೆರಡು-ಹದಿಮೂರು ಜನರು ಈ ದೇಶದಲ್ಲಿ ಶಹೀದ್ ಆಗಿದ್ದಾರೆ. ಅವರು ಬಹಳ ಕಷ್ಟಗಳನ್ನು ಸಹಿಸಿದ್ದಾರೆ. ಮತ್ತು ಈಗ ಸಹ ಕಷ್ಟಗಳನ್ನು ಸಹಿಸುತ್ತಿದ್ದಾರೆ. ಆದರೆ ಅಹ್ಮದಿಯ್ಯತ್ ಮತ್ತು ನೈಜ ಇಸ್ಲಾಮಿನ ಬಗ್ಗೆ ದೃಢ ವಿಶ್ವಾಸದಲ್ಲಿ ಅಲ್ಲಾಹನ ಅನುಗ್ರಹದಿಂದ ಅವರು ಬಹಳ ಬಲಿಷ್ಠರಾಗಿದ್ದಾರೆ. ಅಲ್ಲಾಹನು ಅವರ ವಿಶ್ವಾಸ ಮತ್ತು ದೃಢ ನಂಬಿಕೆಯನ್ನು ಯಾವಾಗಲೂ ವರ್ಧಿಸುತ್ತಾ ಇರಲಿ. ಅದೇ ರೀತಿ ಇಂದು ಸಿಯರಾಲಿಯೋನ್ (ಆಫ್ರಿಕ)ದಲ್ಲಿ ಸಹ ಜಲ್ಸಾ ಸಾಲಾನ ಪ್ರಾರಂಭವಾಗಿದೆ. ಅವರಿಗೆ ಅಲ್ಲಿನ ಹವಾಗುಣದ ಬಗ್ಗೆ ಆತಂಕವಿತ್ತು ಮತ್ತು ಭದ್ರತೆ ಬಗ್ಗೆ ಸಹ ಹೆದರಿಕೆ ಇತ್ತು. ಜಲ್ಸ ಎಲ್ಲ ರೀತಿಗಳಲ್ಲೂ ಅನುಗ್ರಹ ಭರಿತವಾಗಲು ಪ್ರಾರ್ಥಿಸಲು ಅವರು ಅಪೇಕ್ಷಿಸಿರುವರು. ಅಲ್ಲಾಹನು ಅವರ ಜಲ್ಸವನ್ನು ಅನುಗ್ರಹಿಸಲಿ.

ನಾವು ಯಾವಾಗಲೂ ನೆನಪಿಡಬೇಕಾದುದೇನೆಂದರೆ ಈ ಜಲ್ಸಗಳನ್ನು ಯಾವ ಉದ್ದೇಶಕ್ಕಾಗಿ ಜರಗಿಸಲಾಗುತ್ತಿದೆಯೋ ಆ ಉದ್ದೇಶದ ಆತ್ಮವೇನೆಂದು ನಾವು ಮನವರಿಕೆ ಮಾಡಿಕೊಳ್ಳುವವರಾಗಬೇಕು. ಮತ್ತು ಆ ಉದ್ದೇಶಲಕ್ಷ್ಯಗಳನ್ನು ನಾವು ಗಳಿಸುವವರಾಗಬೇಕು. ಲೋಕದ ಯಾವ ದೇಶಗಳಲ್ಲಿ ಈ ಜಲ್ಸ ಜರಗಿಸಲ್ಪಡುತ್ತಿದ್ದರೂ ಹೀಗೆಯೇ ಆಗಬೇಕು. ಬಂಗ್ಲಾದೇಶದಲ್ಲಾಗಲಿ, ಸಿಯರಾಲಿಯೋನ್‌ನಲ್ಲಾಗಲಿ, ಆಫ್ರಿಕದ ಬೇರೆ ದೇಶಗಳಲ್ಲಿ ಅಥವಾ ಬೇರೆ ಎಲ್ಲಿಯಾದರೂ ಜಲ್ಸ ಜರಗುತ್ತಿದ್ದರೂ ಈ ಉದ್ದೇಶಲಕ್ಷ್ಯವನ್ನು ಗಮನಿಸಬೇಕು. ಜಲ್ಸದ ಉದ್ದೇಶ ಲಕ್ಷ್ಯವೇನು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವಿಧ ಸಂದರ್ಭಗಳಲ್ಲಿ ಜಲ್ಸದ ಉದ್ದೇಶಲಕ್ಷ್ಯದ ಬಗ್ಗೆ ವಿವರಿಸಿದ್ದಾರೆ. ಬಂಗ್ಲಾದೇಶದವರು ಮತ್ತು ಸಿಯರಾಲಿಯೋನ್‌ನವರು ಜಲ್ಸದ ಉದ್ಘಾಟನೆಯ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖಗಳನ್ನು ಆಲಿಸಿರಬಹುದೆಂದು ನಾನು ಭಾವಿಸುತ್ತೇನೆ. ಲೋಕದ ಪ್ರತಿಯೊಬ್ಬ ಅಹ್ಮದಿ ಪ್ರತಿ ಸಮಯದಲ್ಲಿ ಈ ಉದ್ದೇಶಲಕ್ಷ್ಯಗಳನ್ನು ತನ್ನ ಮುಂದೆ ಇರಿಸಬೇಕು. ಏಕೆಂದರೆ ಇವು ಕೇವಲ ಮೂರು ದಿನಗಳಿಗೆ ಮಾತ್ರವಾಗಿರುವ ಉದ್ದೇಶಲಕ್ಷ್ಯಗಳಲ್ಲ. ಓರ್ವ ಅಹ್ಮದಿ ಜೀವನ ಪೂರ್ತಿ ನೆನಪಿನಲ್ಲಿಡಬೇಕಾದ ವಿಷಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ, ಜಲ್ಸದ ಉದ್ದೇಶಲಕ್ಷ್ಯಗಳಲ್ಲಿ ಒಂದು ದೇವಭಕ್ತಿ (ತಖ್ವ) ವರ್ಧಿಸಬೇಕು ಎಂದು. ಇದು ತಾತ್ಕಾಲಿಕವಾದುದೇನೂ ಅಲ್ಲ. ಇದು ಸ್ಥಿರವಾಗಿರಬೇಕಾದುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಇನ್ನೊಂದು ಮಾತು, ನೀವು ಜಲ್ಸಕ್ಕೆ ಆಗಮಿಸಿ ಅಲ್ಲಾಹನನ್ನು ಭಯಪಡುವ ಬಗ್ಗೆ ವಾಸ್ತವಿಕವಾಗಿ ಮನವರಿಕೆ ಹೊಂದಬೇಕು ಎಂಬುದು. ಇದು ಸಹ ಸ್ಥಿರವಾಗಿರಬೇಕಾದ ವಿಷಯವಾಗಿದೆ. ಈ ಭಯ ಕೇವಲ ಭಯಭೀತನಾಗಬೇಕೆಂಬ ರೂಪದಲ್ಲಿ ಅಲ್ಲ. ತನಗೆ ಪ್ರಿಯನಾದವನು ತನ್ನ ಬಗ್ಗೆ ಕೋಪಗೊಳ್ಳುವನೇ ಎಂಬ ಭಯವಾಗಿದೆ. ಮತ್ತೊಂದು, ಈ ಜಲ್ಸಕ್ಕೆ ಬಂದು ಇಲ್ಲಿನ ಆಧ್ಯಾತ್ಮಿಕ ಪರಿಸರದ ಪ್ರಭಾವದಿಂದ ಹೃದಯದಲ್ಲಿ ಒಬ್ಬರಿನ್ನೊಬ್ಬರ ಬಗ್ಗೆ ಮೃದುಭಾವನೆ ಸ್ಫುರಿಸುವಂತಾಗಬೇಕು. ಅಲ್ಲಾಹನ ಪ್ರೀತಿಯನ್ನು ಗಳಿಸಲಿಕ್ಕೋಸ್ಕರ ಒಬ್ಬರಿನ್ನೊಬ್ಬರನ್ನು ಪ್ರೀತಿಸುವುದರಲ್ಲಿ ವರ್ಧನೆಯನ್ನು ಹೊಂದುವಂತಾಗಬೇಕು. ಪರಸ್ಪರ ಸಂಬಂಧದಲ್ಲಿ ಎಂತಹ ಭ್ರಾತೃತ್ವ ಪ್ರಕಟವಾಗಬೇಕೆಂದರೆ ಲೋಕದ ಜನರು ಅದರ ಬಗ್ಗೆ, ಇದೇ ನೈಜ ಇಸ್ಲಾಮಿನ ಉಪದೇಶಗಳ ವಾಸ್ತವಿಕವಾದ ಪ್ರಕಟಣೆ ಎಂದು ಪರಿಗಣಿಸಿ ಅದನ್ನು ಆಶಿಸುವವರಾಗಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನನ್ನು ನಂಬುವವರು ವಿನಯಾನ್ವಿತರಾಗಬೇಕಾದುದರ ಆವಶ್ಯಕತೆ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ದುರಹಂಕಾರ ಮತ್ತು ದರ್ಪವನ್ನು ಸಂಪೂರ್ಣವಾಗಿ ತಮ್ಮೊಳಗಿಂದ ಹೊರಹಾಕಬೇಕೆಂದು ಅವರು ಉಪದೇಶಿಸಿದ್ದರು. ಇಂದು ಪ್ರತಿಯೊಂದು ಸ್ಥಳದಲ್ಲಿ ಇಸ್ಲಾಮನ್ನು ಅಪಕೀರ್ತಿಗೊಳಪಡಿಸಲಾಗುತ್ತಿರುವಾಗ, ಮುಸ್ಲಿಮರೇ ಮುಸ್ಲಿಮರ ರಕ್ತದಾಹಿಗಳಾಗಿರುವಾಗ, ಮುಸ್ಲಿಮರ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳಿಂದ ದೂರ ಸರಿದಿರುವಾಗ, ಅಹ್ಮದಿಯರಾದ ನಾವೇ ಲೋಕಕ್ಕೆ ಇಸ್ಲಾಮಿನ ಸುಂದರ ತತ್ವಗಳನ್ನು ತಿಳಿಸಿಕೊಡಬೇಕಾಗಿದೆ. ಇದಕ್ಕೋಸ್ಕರ ಎಲ್ಲದಕ್ಕಿಂತಲೂ ಮುಖ್ಯವಾದುದು ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸುವುದಾಗಿದೆ.

ಈ ಜಲ್ಸಗಳನ್ನು ಜರಗಿಸುವುದೇಕೆಂದರೆ ಜಲ್ಸದ ಪರಿಸರದಲ್ಲಿ ಜೀವಿಸಿ ಈ ಮೂರು ದಿನಗಳಲ್ಲಿ ತಮಗೆ ತಗಲಿರುವ ತುಕ್ಕನ್ನು, ಎಂದರೆ ತಮ್ಮ ಹೃದಯಗಳಿಗೆ ತಗಲಿರುವ ತುಕ್ಕನ್ನು ನಿವಾರಿಸಬೇಕು. ನಂಬಿಕೆಗಳ ದೃಷ್ಟಿಯಲ್ಲಿ ನಿಸ್ಸಂಶಯವಾಗಿಯೂ ಇಲ್ಲಿರುವ ಅಹ್ಮದಿಯರು ಬಹಳ

ಬಲಿಷ್ಠರಾಗಿದ್ದಾರೆ. ನಾನು ಮೊದಲು ಹೇಳಿದ ಹಾಗೆ ಬಂಗ್ಲಾದೇಶದ ಅಹ್ಮದಿಯರು ಜೀವವನ್ನೂ ಬಲಿದಾನ ಮಾಡಿದ್ದಾರೆ. ಆದರೆ ಅಲ್ಲಾಹನು ನಮ್ಮವರಲ್ಲಿ ಪ್ರತಿಯೊಬ್ಬನಿಂದ ಇಚ್ಛಿಸುವುದೇನೆಂದರೆ ಇಸ್ಲಾಮ್ ಧರ್ಮದ ಪುನಶ್ಚೇತನದ ಈ ಕಾಲಘಟ್ಟದಲ್ಲಿ ನಮ್ಮ ಕರ್ಮಗಳ ಸ್ಥಿತಿಯನ್ನು ಉನ್ನತ ಮಟ್ಟಕ್ಕೆ ತಲಪಿಸುವವರು ನಾವಾಗಬೇಕು. ನಮಾಝಿನ ಅನುಷ್ಠಾನವನ್ನು ಅಲ್ಲಾಹನು ವಿವರಿಸಿದ ರೀತಿಯಲ್ಲಿ ಮಾಡಬೇಕು. ನಮ್ಮ ನಮಾಝ್‌ಗಳ ಒಳಗೆ ನಮಾಝ್‌ಗಳ ಆತ್ಮವನ್ನು ಸ್ಥಾಪಿಸಲು ಪ್ರಯತ್ನ ಮಾಡಿರಿ. ಇದರ ಬಗ್ಗೆ ನಾನು ಕಳೆದ ಎರಡು ಖುತ್‌ಬಗಳಲ್ಲಿ ಸವಿಸ್ತಾರವಾಗಿ ಹೇಳಿದ್ದೇನೆ. ನೀವು **ಹುಖೂಖುಲ್‌ಇಬಾದ್** (ಮಾನವರ ಹಕ್ಕುಗಳು) ನಿಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳೊಂದಿಗೆ ಈಡೇರಿಸಿ ಕೊಡಿರಿ. ನಾನು ಹೇಳಿದ ಹಾಗೆ ಜಲ್ಸದ ಒಂದು ಉದ್ದೇಶ ತಖ್ವವನ್ನು ವರ್ಧಿಸುವುದಾಗಿದೆ. ತಖ್ವದ ಬಗ್ಗೆ ವಿವರಣೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ:

ತಖ್ವ ಎಂದರೆ ಕೆಡುಕಿನ ಸೂಕ್ಷ್ಮಮಾರ್ಗಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದಾಗಿದೆ. ಆದರೆ ನೀವು ನೆನಪಿಟ್ಟು ಕೊಳ್ಳಿರಿ, ಉದಾಹರಣೆಗೆ ಒಬ್ಬನು ಹೇಳುತ್ತಾನೆ ನಾನು ಒಳಿತನ್ನು ಗಳಿಸಿರುವೆನು; ಏಕೆಂದರೆ ನಾನು ಯಾರ ಸಂಪತ್ತನ್ನೂ ತೆಗೆದುಕೊಂಡಿಲ್ಲ, ಯಾರನ್ನೂ ಲೂಟಿಮಾಡಿಲ್ಲ, ಸಂಪತ್ತನ್ನು ಅಪಹರಿಸಿಲ್ಲ, ಯಾರ ಹಕ್ಕನ್ನೂ ಕಿತ್ತುಕೊಂಡಿಲ್ಲ, ದರೋಡೆ ಮಾಡಿಲ್ಲ, ಕದ್ದಿಲ್ಲ, ಯಾರ ಕಡೆಗೂ ದುರ್ನೋಟ ಬೀರಿಲ್ಲ, ವ್ಯಭಿಚಾರ ಮಾಡಿಲ್ಲ ಇತ್ಯಾದಿ. ಆದರೆ ಜ್ಞಾನಿಗಳ ದೃಷ್ಟಿಯಲ್ಲಿ ಇಂತಹ ಒಳಿತುಗಳು ಅಪಹಾಸ್ಯಕರವಾಗಿವೆ. ಇವು ಒಳಿತುಗಳಲ್ಲ. ಅಭಿರುಚಿಗಳಾಗಿವೆ. ಏಕೆಂದರೆ ಇಂತಹ ವ್ಯಕ್ತಿ ಕೆಟ್ಟ ಕೆಲಸ ಮಾಡಿದರೆ, ಕದ್ದರೆ ಅಥವಾ ದರೋಡೆ ಮಾಡಿದರೆ ಅವನು ಅದರ ಶಿಕ್ಷೆಯನ್ನು ಅನುಭವಿಸುವನು. ಆದುದರಿಂದ ಜ್ಞಾನಿಗಳ ದೃಷ್ಟಿಯಲ್ಲಿ ಇವು ಒಳಿತುಗಳಲ್ಲ. ಅವು ಗಮನಾರ್ಹವೂ ಅಲ್ಲ. ವಾಸ್ತವಿಕ ಒಳಿತು ಏನೆಂದರೆ ಮಾನವರ ಸೇವೆಯಲ್ಲಿ ಮಗ್ನನಾಗುವುದು, ಅಲ್ಲಾಹನ ಮಾರ್ಗದಲ್ಲಿ ಪರಿಪೂರ್ಣ ಸತ್ಯದಿಂದಲೂ ನಿಷ್ಠೆಯಿಂದಲೂ ಕಾರ್ಯನಿರತನಾಗಿ ಅವನ ಮಾರ್ಗದಲ್ಲಿ ಜೀವಾರ್ಪಣೆ ಮಾಡಲು ಸಹ ಸಿದ್ಧನಾಗಿರುವುದು ಆಗಿದೆ. ಇದೇ ಕಾರಣದಿಂದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: **ಇನ್ನಲ್ಲಾಹ ಮಅಲ್ಲಧೀನತ್ತಖವ್ ವಲ್ಲಧೀನಹುಮ್ ಮುಹ್‌ಸಿನೂನ್.** ಯಾರು ಕೆಡುಕಿನಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೋ ಮತ್ತು ಅದರೊಂದಿಗೆ ಸತ್ಕರ್ಮಗಳನ್ನು ಮಾಡುತ್ತಾರೋ ಅವರೊಂದಿಗೆ ನಿಶ್ಚಯವಾಗಿಯೂ ಅಲ್ಲಾಹನಿದ್ದಾನೆ.

ದುಆ(ಪ್ರಾರ್ಥನೆ) ಇದರ ವಾಸ್ತವಿಕತೆ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ: ದುಆ ಎಂತಹ ಪರಿವರ್ತನಕಾರಿಯಾಗಿದೆ ಎಂದರೆ ಅದು ಒಂದು ಮುಷ್ಠಿ ಮಣ್ಣನ್ನು ಚಿನ್ನವಾಗಿ ಮಾಡುತ್ತದೆ. ಪ್ರಾರ್ಥನೆ ಇಂತಹ ಪರಿಣಾಮ ಬೀರುವುದಾಗಿರಬೇಕು. ಪ್ರಾರ್ಥನೆ ಆಂತರಿಕ ಕಶ್ಮಲಗಳನ್ನು ತೊಳೆದು ಹಾಕುವ ನೀರು ಸಹ ಆಗಿದೆ.

ಆದರೆ ದುಆ ಹೇಗಿರಬೇಕು? ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರಾರ್ಥನೆ ಹೇಗಿರಬೇಕೆಂದರೆ ಅದು ಹೃದಯದಿಂದ ಹೊರಡುವಂತಹದಾಗಿದ್ದು ಆತ್ಮವನ್ನು ಕರಗಿಸುವಂತಾಗಬೇಕು. ಆತ್ಮವು ನೀರಿನ ಹಾಗೆ ಹರಿದು ಅಲ್ಲಾಹನ ಆಸ್ಥಾನದಲ್ಲಿ ಸುರಿಯುವಂತಿರಬೇಕು. ಅದು ಅಲ್ಲಾಹನ ಸನ್ನಿಧಿಯಲ್ಲಿ ನಿಂತು ಕೊಳ್ಳುವುದೂ, ಬಾಗುವುದೂ, ಸಾಷ್ಟಾಂಗ ಪ್ರಣಾಮ ಮಾಡುವುದೂ ಆಗಬೇಕು. ಇಸ್ಲಾಮ್ ಕಲಿಸುತ್ತಿರುವ ನಮಾಝ್ ಇದರ ನೆರಳಾಗಿದೆ. ನಮಾಝ್ ವಾಸ್ತವಿಕವಾಗಿ ಹೇಗಿದೆ ಎಂದರೆ ಅದರ ಮೂಲಕ ಅಲ್ಲಾಹನ ಸಾಮೀಪ್ಯ ದೊರಕುತ್ತದೆ. ಜನರು ಹೇಳುತ್ತಾರೆ: ನಾವು ಬಹಳ ನಮಾಝ್ ನಿರ್ವಹಿಸಿದ್ದೇವೆ. ಆದರೆ ಅಲ್ಲಾಹನ ಸಾಮೀಪ್ಯ ದೊರಕಿಲ್ಲ ಎಂದು. ಅಂತಹ ಜನರು ಮೇಲೆ ವಿವರಿಸಿದ ಸ್ಥಿತಿಯನ್ನು ತಮ್ಮಲ್ಲಿ ಹುಟ್ಟಿಸುವ ಆವಶ್ಯಕತೆ ಇದೆ. ಇಸ್ಲಾಮಿನ ಶರೀಅತ್ ಅದರ ಚಿತ್ರವನ್ನು ಸಾಮಾನ್ಯ ನಮಾಝ್‌ನಲ್ಲಿ ಚಿತ್ರಿಸಿ ತೋರಿಸಿದೆ. ಶಾರೀರಿಕವಾಗಿ ಮಾಡುವ ನಮಾಝ್ ಆಧ್ಯಾತ್ಮಿಕ ನಮಾಝ್ ಕಡೆಗೆ ಪ್ರೇರೇಪಿಸುವಂತಿರಬೇಕು. ಏಕೆಂದರೆ ಅಲ್ಲಾಹನು ಮನುಷ್ಯನನ್ನು ಹೇಗೆ ಸೃಷ್ಟಿಸಿರುವನೆಂದರೆ ಆತ್ಮದ ಪ್ರಭಾವ ಶರೀರದ ಮೇಲೆ ಉಂಟಾಗುತ್ತದೆ. ಅದೇ ರೀತಿ ಶರೀರದ ಪ್ರಭಾವ ಆತ್ಮದ ಮೇಲೂ ಉಂಟಾಗುತ್ತದೆ. ಬಾಹ್ಯವಾಗಿ ನಮಾಝ್‌ನಲ್ಲಿ ನಿಂತಾಗ, ಬಾಗುವಾಗ, ಸಾಷ್ಟಾಂಗ ಪ್ರಣಾಮ ಮಾಡುವಾಗ ಅದರೊಂದಿಗೆ ಆತ್ಮ ಸಹ ನಿಲ್ಲದಿದ್ದರೆ, ಬಾಗದಿದ್ದರೆ, ಸಾಷ್ಟಾಂಗ ಪ್ರಣಾಮ ಮಾಡದಿದ್ದರೆ ಆ ನಮಾಝ್‌ನಿಂದ ಪ್ರಯೋಜನವೇನೂ ದೊರಕಲಾರದು. ಆದರೆ ಆತ್ಮ ಹೀಗೆ ಭಾಗವಹಿಸಲು ಸಾಧ್ಯವಾಗುವುದು ಜ್ಞಾನದ ಗಳಿಕೆಯನ್ನು ಹೊಂದುವಾಗ ಮಾತ್ರ. ಜ್ಞಾನಗಳಿಕೆ ಸಾಧ್ಯವಾಗುವುದು ಅಲ್ಲಾಹನ ಅನುಗ್ರಹದ ಮೂಲಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೊಂದು ಸ್ಥಳದಲ್ಲಿ ಅಲ್ಲಾಹನ ಬಗ್ಗೆ ಹೀಗೆ ವಿವರಿಸಿದ್ದಾರೆ: ಅಲ್ಲಾಹನ ಅನುಗ್ರಹ ಸಿಗುವುದು ಸಹ ಅಲ್ಲಾಹನ ಅನುಗ್ರಹದ ಮೂಲಕವೇ ಆಗಿದೆ. ಆದುದರಿಂದ ಅಲ್ಲಾಹನ ಅನುಗ್ರಹ ಗಳಿಸಲು ಅಲ್ಲಾಹನ ಮುಂದೆಯೇ ಬಾಗಿರಿ. ಅವನಿಂದಲೇ ಬೇಡಿಕೊಳ್ಳಿರಿ. ಅಲ್ಲಾಹನ ಅನುಗ್ರಹದಿಂದ ಜ್ಞಾನ ಲಭಿಸಿದರೆ ಆಗ ವಾಸ್ತವಿಕ ನಮಾಝನ್ನು ಅನುಷ್ಠಿಸಲು ಸಾಧ್ಯವಾಗುವುದು. ಇದಕ್ಕೋಸ್ಕರ ಬಹಳ ಪರಿಶ್ರಮ ಪಡಬೇಕಾಗಿದೆ. ನಿರಂತರ ಪ್ರಯತ್ನ ಮಾಡಬೇಕಾಗಿದೆ. ಹಾಗೆ ಪರಿಶ್ರಮ ಪಡುವಾಗ ನಮ್ಮನ್ನು ಸೃಷ್ಟಿಸಿದ ಉದ್ದೇಶ ಲಕ್ಷ್ಯವನ್ನೂ ನಾವು ಗಳಿಸಿದಂತಾಗುವುದು.

ವಾಸ್ತವಿಕ ವಿಷಯವೇನೆಂದರೆ ಎಲ್ಲದಕ್ಕಿಂತಲೂ ಕಷ್ಟಕರವಾದುದು **ಹುಖೂಖುಲ್ ಇಬಾದ್** (ಜನರ ಹಕ್ಕುಗಳಿಗೆ) ಸಂಬಂಧಿಸಿದ ಬಾಧ್ಯತೆಗಳಾಗಿವೆ. ಜನರು ನಮಾಝ್ ಅನುಷ್ಠಿಸುತ್ತಾರೆ, ಮಸ್‌ಜಿದ್‌ಗೆ ಸಹ ಆಗಮಿಸುತ್ತಾರೆ, ಚಂದ ಸಹ ಕೊಡುತ್ತಾರೆ. ಕೆಲವು ಸಾರಿ ಜೀವಾರ್ಪಣೆ ಸಹ ಮಾಡುತ್ತಾರೆ. ಆದರೆ ಕೆಲವು

ಸಂದರ್ಭಗಳು ಹೇಗಿರುತ್ತವೆ ಎಂದರೆ ಅವರಿಗೆ ಜನರ ಹಕ್ಕುಗಳನ್ನು ಈಡೇರಿಸಿಕೊಡುವುದು ಕಷ್ಟಕರವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಬಹಳ ಜಾಗರೂಕತೆಯಿಂದ ಹೆಜ್ಜೆ ಹಾಕಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಶತ್ರುವಿನ ವಿರುದ್ಧ ಸಹ ಮಿತಿಮೀರಿ ಕಠಿಣವಾಗಿ ವರ್ತಿಸಬಾರದು ಎಂದು ನನ್ನ ಅಭಿಪ್ರಾಯವಾಗಿದೆ. ಕೆಲವು ಜನರು ಬಯಸುವುದೇನೆಂದರೆ ತಮ್ಮ ಶತ್ರುವನ್ನು ತಮಗೆ ಸಾಧ್ಯವಿರುವಷ್ಟು ನಾಶಮಾಡಲು ಪ್ರಯತ್ನ ಮಾಡಬೇಕೆಂದು. ಅವರು ಹೀಗೆ ಚಿಂತಿಸುವಾಗ ತಾವು ಮಾಡುವುದು ಧರ್ಮಸಮ್ಮತವೋ ಅಲ್ಲವೋ ಎಂದು ಸಹ ಲಕ್ಷಿಸುವುದಿಲ್ಲ. ಅವರು ತಮ್ಮ ಶತ್ರುವನ್ನು ಅಪಕೀರ್ತಿಗೆ ಗುರಿಪಡಿಸಲು ಸುಳ್ಳು ದೋಷಾರೋಪ ಮಾಡುತ್ತಾರೆ. ಸುಳ್ಳು ಸೃಷ್ಟಿಸುತ್ತಾರೆ. ಅವನನ್ನು ದೂಷಿಸುತ್ತಾರೆ. ಅನ್ಯರನ್ನು ಅವನ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸುತ್ತಾರೆ. ನೀವೇ ಹೇಳಿರಿ, ಒಂದು ಸಾಮಾನ್ಯವಾದ ವಿರೋಧದ ಕಾರಣದಿಂದ ಎಷ್ಟು ಕೆಡುಕುಗಳಿಗೆ ಒಬ್ಬನು ವಾರೀಸುದಾರನಾಗುತ್ತಾನೆ. ಈ ಕೆಡುಕುಗಳಿಗೆ ಶಿಶುಗಳು ಜನಿಸುತ್ತವೆ. ಆಗ ಸ್ಥಿತಿ ಎಷ್ಟು ಕೆಟ್ಟದಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನಾನು ನಿಮ್ಮೊಂದಿಗೆ ಸತ್ಯವಾಗಿ ಹೇಳುತ್ತೇನೆ, ನೀವು ಯಾರನ್ನೂ ನಿಮ್ಮ ವೈಯ್ಯಕ್ತಿಕ ಶತ್ರುವಾಗಿ ಭಾವಿಸಬೇಡಿರಿ. ನೀವು ಹಗೆತನದ ಸ್ವಭಾವವನ್ನು ಸಂಪೂರ್ಣವಾಗಿ ತ್ಯಜಿಸಿರಿ. ಅಲ್ಲಾಹನು ನಿಮ್ಮ ಜೊತೆಗಿರುವುದಾದರೆ, ನೀವು ಅಲ್ಲಾಹನಿಗೆ ಸೇರಿದವರಾಗಿದ್ದರೆ, ಅಲ್ಲಾಹನು ನಿಮ್ಮ ಶತ್ರುಗಳನ್ನು ನಿಮ್ಮ ಸೇವಕರೊಂದಿಗೆ ಸೇರಿಸಬಲ್ಲನು. ಆದರೆ ನೀವು ಅಲ್ಲಾಹನೊಂದಿಗೆ ನಿಮ್ಮ ಸಂಬಂಧವನ್ನು ವಿಚ್ಛೇಧಿಸಿ ಕುಳಿತರೆ, ಅವನೊಂದಿಗೆ ಸ್ನೇಹ ಸಂಬಂಧವನ್ನು ಬಾಕಿಯಾಗಿರಿಸಿರದಿದ್ದರೆ, ಅಲ್ಲಾಹನ ಆಜ್ಞೆಗಳ ವಿರುದ್ಧ ವರ್ತಿಸುವುದು ನಿಮ್ಮ ಸ್ವಭಾವ ಗುಣವಾಗಿದ್ದರೆ, ಅವನ ಇಚ್ಛೆಗೆ ವಿರುದ್ಧವಾಗಿ ನಿಮ್ಮ ಕರ್ಮಗಳಾಗಿದ್ದರೆ ಆಗ ಅಲ್ಲಾಹನಿಗಿಂತ ದೊಡ್ಡ ಶತ್ರು ನಿಮಗೆ ಬೇರೆ ಯಾರಿರಲು ಸಾಧ್ಯ? ಜನರ ಶತ್ರುತ್ವದಿಂದ ಮನುಷ್ಯನು ರಕ್ಷಣೆ ಪಡೆಯಬಹುದು. ಆದರೆ ಅಲ್ಲಾಹನು ಶತ್ರುವಾಗಿರುವಾಗ ಎಲ್ಲ ಸೃಷ್ಟಿಗಳೂ ನಿಮ್ಮ ಸ್ನೇಹಿತರಾದರೂ ಏನೂ ಪ್ರಯೋಜನವಾಗಲಾರದು. ಆದುದರಿಂದ ನಿಮ್ಮ ವರ್ತನೆ ಅಲ್ಲಾಹನ ಪ್ರವಾದಿಗಳ ವರ್ತನೆ ಪ್ರಕಾರವಾಗಿರಲಿ. ಅಲ್ಲಾಹನು ಇಚ್ಛಿಸುವುದೇನೆಂದರೆ ಯಾವುದೇ ವೈಯ್ಯಕ್ತಿಕ ವೈರಿ ಇರಬಾರದು. ಯಾರನ್ನೂ ವೈಯ್ಯಕ್ತಿಕವಾಗಿ ದ್ವೇಷಿಸಬಾರದು. ನೀವು ಚೆನ್ನಾಗಿ ನೆನಪಿಡಿರಿ, ಮನುಷ್ಯನಿಗೆ ಘನತೆ ಮತ್ತು ಸಾತ್ವಿಕತೆ ಲಭಿಸುವುದು ಅವನು ಯಾರ ವಿರುದ್ಧವೂ ಸಹ ವೈಯ್ಯಕ್ತಿಕ ಹಗೆತನ ಹೊಂದಿರದೆ ಇದ್ದಾಗ ಮಾತ್ರವಾಗಿದೆ. ಆದರೆ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಗೌರವಕ್ಕೆ ಸಂಬಂಧಿಸಿದ ವಿಷಯ ಬೇರೆಯೇ ಆಗಿದೆ. ಅಲ್ಲಾಹನಿಗೆ ಮತ್ತು ಅವನ ಸಂದೇಶವಾಹಕರಿಗೆ ಗೌರವ ನೀಡದೆ ಅವರ ಶತ್ರುವಾಗಿರುವವನನ್ನು ನೀವು ಸಹ ನಿಮ್ಮ ಶತ್ರುವಾಗಿ ಗಣಿಸಿರಿ. ಆದರೆ ನೀವು ಅವನನ್ನು ಶತ್ರುವಾಗಿ ಗಣಿಸಬೇಕೆಂದು ಹೇಳಿದುದರ ಅರ್ಥ ಅವನ ವಿರುದ್ಧ ಸುಳ್ಳು ಸೃಷ್ಟಿಸಿ ದೋಷಾರೋಪ ಮಾಡಿರಿ ಎಂದಲ್ಲ. ಅವನಿಗೆ ಅನಾವಶ್ಯಕವಾಗಿ ಕಷ್ಟ ಉಂಟುಮಾಡಲು ಯೋಜನೆಗಳನ್ನು ರೂಪಿಸಿರಿ ಎಂದಲ್ಲ. ನೀವು ಹಾಗೆ ಮಾಡಬೇಡಿರಿ. ನೀವು ಅಂತಹ ವ್ಯಕ್ತಿಯಿಂದ ದೂರ ಸರಿಯಿರಿ ಮತ್ತು ಅವನಿಗೆ ಸಂಬಂಧಿಸಿದ ವಿಷಯವನ್ನು ಅಲ್ಲಾಹನಿಗೆ ವಹಿಸಿಕೊಡಿರಿ. ಸಾಧ್ಯವಿದ್ದರೆ ಅವನ ಸುಧಾರಣೆಗೋಸ್ಕರ ಪ್ರಾರ್ಥಿಸಿರಿ. ನೀವು ಅವನೊಂದಿಗೆ ಹೊಸ ರೀತಿಯ ಜಗಳ ಪ್ರಾರಂಭ ಮಾಡಬೇಡಿರಿ. ಇವುಗಳು ಆತ್ಮ ಪರಿಶುದ್ಧಿಗೆ ಸಂಬಂಧಿಸಿದ ಕಾರ್ಯಗಳಾಗಿವೆ.

ಒಂದು ಸಂಭವ ಹೀಗೆ ವರದಿಯಾಗಿದೆ. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಒಬ್ಬ ಶತ್ರುವಿನ ವಿರುದ್ಧ ಹೋರಾಡುತ್ತಿದ್ದರು. ಅವರು ಹೋರಾಡುತ್ತಾ ಇದ್ದುದು ಕೇವಲ ಅಲ್ಲಾಹನಿಗೋಸ್ಕರವಾಗಿತ್ತು. ಕೊನೆಗೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ತನ್ನ ಶತ್ರುವನ್ನು ಕೆಳಗೆ ತಳ್ಳಿ ಹಾಕಿ ಅವನ ಎದೆಯ ಮೇಲೆ ಕುಳಿತರು. ಆಗ ಆ ಶತ್ರು ತಕ್ಷಣ ಹಝ್ರತ್ ಅಲಿಯವರ ಮುಖಕ್ಕೆ ಉಗುಳಿದನು. ಆಗ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಶತ್ರುವಿನ ಎದೆಯಿಂದ ಕೂಡಲೆ ಎದ್ದು ನಿಂತು ಅವನನ್ನು ಬಿಟ್ಟು ಬಿಟ್ಟರು. ಅವರು ಹೇಳಿದರು, ನಾನು ಇಷ್ಟರ ತನಕ ಅಲ್ಲಾಹನಿಗೋಸ್ಕರ ನಿನ್ನ ವಿರುದ್ಧ ಹೋರಾಡುತ್ತಾ ಇದ್ದೆ. ಆದರೆ ಈಗ ನೀನು ನನ್ನ ಮುಖದ ಮೇಲೆ ಉಗುಳಿರುವುದರಿಂದ ನನ್ನ ಸ್ವಂತ ಆತ್ಮ ಸಹ ಅದರೊಂದಿಗೆ ಸಹಭಾಗಿಯಾಗುತ್ತದೆ. ಆದುದರಿಂದ ನಾನು ನನಗೋಸ್ಕರ ನಿನ್ನನ್ನು ಕೊಲ್ಲುವುದನ್ನು ಇಷ್ಟಪಡುವುದಿಲ್ಲ.

ಈ ಘಟನೆಯಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ತನ್ನ ವೈಯ್ಯಕ್ತಿಕ ಶತ್ರುವನ್ನು ಶತ್ರುವಾಗಿ ಗಣಿಸಲಿಲ್ಲ. ಇಂತಹ ಪ್ರಕೃತಿ ಮತ್ತು ಸ್ವಭಾವ ನಿಮ್ಮಲ್ಲಿ ಸೃಷ್ಟಿಸಬೇಕು. ನೀವು ನಿಮ್ಮ ಇಂದ್ರಿಯಾಸಕ್ತಿಗೋಸ್ಕರ ಯಾರಿಗಾದರೂ ಕಷ್ಟ ಕೊಡುವುದಾದರೆ ಮತ್ತು ಹಗೆತನವನ್ನು ವಿಶಾಲಗೊಳಿಸುವುದಾದರೆ ಅಲ್ಲಾಹನನ್ನು ಕೋಪಗೊಳ್ಳುವಂತೆ ಮಾಡುವ ಅದಕ್ಕಿಂತ ದೊಡ್ಡ ಕೃತ್ಯ ಬೇರೆ ಏನಿದೆ?

ಆದುದರಿಂದ ನಿಮ್ಮ ವೈಯ್ಯಕ್ತಿಕ ವಿರೋಧದ ಕಾರಣ ಯಾರಿಗೂ ಕಷ್ಟ ಕೊಡಬಾರದು. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಶತ್ರುವನ್ನು ನಿಮ್ಮ ಶತ್ರು ಎಂದು ಪರಿಗಣಿಸಿರಿ. ನೀವು ಅವನಿರುವಲ್ಲಿಂದ ಎದ್ದು ಹೋಗಿರಿ. ಅವನಿಗೋಸ್ಕರ ಪ್ರಾರ್ಥಿಸಿರಿ. ಅವನ ಸುಧಾರಣೆಗೋಸ್ಕರ ಪ್ರಯತ್ನಿಸಿರಿ. ಅವನ ಆಕ್ರಮಣಗಳಿಗೆ ಧರ್ಮಬದ್ಧ ರೀತಿಯಲ್ಲಿ ಉತ್ತರ ನೀಡಿರಿ. ಆದರೆ, ಅವನ ಪ್ರತಿಯೊಂದು ಮಾತನ್ನು ಕೆಟ್ಟದಾಗಿ ಪರಿಗಣಿಸಿ ಪರಿಪೂರ್ಣವಾಗಿ ತಪ್ಪಾದ ರೀತಿಯಲ್ಲಿ ಶತ್ರುತ್ವ ಪ್ರಕಟಿಸಬೇಡಿರಿ.

ಅಲ್ಲಾಹನು ನಮಗೆ ತಖ್ವದ ವಾಸ್ತವಿಕ ಅರ್ಥವನ್ನು ಮನವರಿಕೆ ಮಾಡಿಕೊಡುವಂತಾಗಲಿ. ನಮ್ಮ ನಮಾಝ್‌ಗಳು ಮತ್ತು ಆರಾಧನೆಗಳು ಅಲ್ಲಾಹನ ಅನುಗ್ರಹ ದೊರಕಿಸಿಕೊಡುವವುಗಳೂ ಅವನ ಸಾಮೀಪ್ಯ ಲಭಿಸುವಂತೆ

ಮಾಡುವವುಗಳೂ ಆಗಲಿ. ಅಲ್ಲಾಹನು ನಮ್ಮನ್ನು ಹುಖೂಖುಲ್ ಇಬಾದ್‌ನ ಅತಿಸೂಕ್ಷ್ಮ ಅಂಶಗಳನ್ನು ಸಹ ಅರಿತುಕೊಂಡು ಅದನ್ನು ನೆರವೇರಿಸಿ ಕೊಡುವವರನ್ನಾಗಿ ಮಾಡಲಿ. ನಮ್ಮ ಪ್ರತಿಯೊಂದು ಕರ್ಮ –ಅದು ಲೌಕಿಕವಾಗಿದ್ದರೂ– ಅಲ್ಲಾಹನ ಸಂಪ್ರೀತಿ ಗಳಿಸುವುದಕ್ಕೆ ಆದ್ಯತೆ ನೀಡುವ ಸಂಕಲ್ಪದಿಂದ ಮಾಡುವವುಗಳಾಗಲಿ. ಅಲ್ಲಾಹನು ನಮಗೆ ಹೀಗೆ ಮಾಡುವ ಭಾಗ್ಯವನ್ನು ನೀಡಲಿ –ಆಮೀನ್.

―――――*****―――――

***Friday Sermon delivered by Hadrath Khaleefatul Masih Al Khamis***(atba)

*At, Masjid Baithul Futhuh, London on 03-02-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon